# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಆ-1/16/ಸು/2020

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನಸೌಧ,
ಬೆಂಗಳೂರು-560 001, ದಿನಾಂಕ:24.03.2020.

## ಸುತ್ತೋಲೆ

**ಉಲ್ಲೇಖ**: ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರದ ಇವರ ಸುತ್ತೋಲೆ
ಸಂಖ್ಯೆ:ಸಿಆಸುಇ:123:ಡಿಬಿಎಂ:2020 ದಿ: 23.03.2020

******

ಕರ್ನಾಟಕ ರಾಜ್ಯದಲ್ಲಿ **ಕೊರೋನಾ ವೈರಸ್ (ಕೋವಿಡ್-19)** ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸಚಿವಾಲಯ ಸೇರಿದಂತೆ ರಾಜ್ಯ ಮಟ್ಟದ ಕಛೇರಿಗಳಲ್ಲಿ ಹಾಗೂ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅತ್ಯಗತ್ಯ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಇತರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಬಿ, ಗ್ರೂಪ್-ಸಿ, ಗ್ರೂಪ್-ಡಿ ಅಧಿಕಾರಿ/ನೌಕರರುಗಳಿಗೆ ದಿನಾಂಕ:24-03-2020 ರಿಂದ 31-03-2020 ರವರೆಗೆ ಕಛೇರಿಗೆ ಬರುವುದರಿಂದ ವಿನಾಯಿತಿ ನೀಡಿ ಉಲ್ಲೇಖಿತ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಅದರಂತೆ ಈ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ **ದಿನಾಂಕ: 26-03-2020 ರಿಂದ 31-03-2020 ರವರೆಗೆ** ಕಛೇರಿಗೆ ಹಾಜರಾಗುವುದರಿಂದ ವಿನಾಯಿತಿ ನೀಡಲಾಗಿದ್ದು, ಹಾಜರಾತಿಯಿಂದ ವಿನಾಯಿತಿ ನೀಡಲ್ಪಟ್ಟ ಎಲ್ಲಾ ಅಧಿಕಾರಿ/ನೌಕರರು ಕೇಂದ್ರ ಸ್ಥಾನದಲ್ಲಿ ಲಭ್ಯವಿರುವುದು ಹಾಗೂ ತುರ್ತು ಕಾರಣಗಳಿದ್ದಾಗ ಮೇಲಾಧಿಕಾರಿಗಳು ಸೇವೆಯನ್ನು ಬಯಸಿದಲ್ಲಿ ಅಧಿಕಾರಿ/ನೌಕರರಗಳು ಯಾವುದೇ ಕಾರಣ ನೀಡದೆ ಕಛೇರಿಗೆ ಹಾಜರಾಗತಕ್ಕದ್ದು.

ಶಾಸಕರ ಭವನದ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಅಲ್ಲಿನ ಅಧಿಕಾರಿ/ನೌಕರರುಗಳು ಅಲ್ಲಿನ ಕಾರ್ಯಗಳ ಅಗತ್ಯತೆಗೆ ಅನುಗುಣವಾಗಿ ಉಪ ಕಾರ್ಯದರ್ಶಿ/ಸಹಾಯಕ ಕ್ಷೇತ್ರಾಧಿಕಾರಿಗಳು ನಿಯೋಜಿಸಿದಂತೆ ಕಾರ್ಯನಿರ್ವಹಿಸುವುದು.

**(ಕೆ. ಆರ್. ಮಹಾಲಕ್ಷ್ಮಿ)**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.
24/3/2020.

**ಗೆ,**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ
(ಶಾಸಕರ ಭವನವು ಸೇರಿದಂತೆ)

.....2...

**ಪ್ರತಿಗಳು** :-

1. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
2. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
3. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
4. ಮಾನ್ಯ ಸರ್ಕಾರಿ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
5. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಶಾಖೆಗೆ, ಕ.ವಿ.ಪ.
6. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕ.ವಿ.ಪ.
7. ಜಂಟಿ ಕಾರ್ಯದರ್ಶಿರವರ ಆಪ್ತ ಸಹಾಯಕರಿಗೆ, ಕ.ವಿ.ಪ.
8. ಆಂತರಿಕ ಆರ್ಥಿಕ ಸಲಹೆಗಾರರು / ಆರ್ಥಿಕ ಅಧಿಕಾರಿಯವರಿಗೆ, ಕ.ವಿ.ಪ.
9. ಸಿಸ್ಟಂ ಅನಾಲಿಸ್ಟ್ / ಸೀನಿಯರ್ ಪ್ರೋಗ್ರಾಮರ್, ಗಣಕ ಕೇಂದ್ರ, ಕ.ವಿ.ಪ.
10. ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಹಾಗೂ ಶಾಸಕರ ಭವನದ ಸೂಚನಾ ಫಲಕಗಳಿಗೆ.
11. ಸಂಬಂಧಪಟ್ಟ ಕಡತಕ್ಕೆ / ರಕ್ಷಾ ಕಡತಕ್ಕೆ, ಕ.ವಿ.ಪ.